ದಿನಾಂಕ: 08.11.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು : 11, 13 ರಿಂದ 17 ನೇ ಪ್ರತಿವಾದಿ ಪರ ಶ್ರೀ. ಎಸ್.ವಿ.ಜೆ. ವಕೀಲರಿಂದ**

ನಾನು ದಾವೆ ಮಾಡಿದ ಜಮೀನಿನ ಸರ್ವೆ ನಂ. 292 ಮತ್ತು 296 ಇರುತ್ತದೆ. ಸದರಿ ಎರಡು ಜಮೀನಿನ ಚಕಬಂದಿ ಹೇಳಲು ಬರುವುದಿಲ್ಲ. ಸದರಿ ಜಮೀನಿನ ಕಬ್ಜೆಯಲ್ಲಿ ಯಾರು ಇದ್ದಾರೆ ಎಂದರೆ ಸಾಕ್ಷಿಯು ನಾವು ಇದ್ದೇವೆ ಎಂದು ಉತ್ತರಿಸುತ್ತಾರೆ. ಸದರಿ ಜಮೀನಿನ ಉತಾರೆ ನಾನು ನೋಡಿಲ್ಲ. ಉತಾರೆಯಲ್ಲಿ ಈಗ ಯಾರು ಹೆಸರು ಇದೆ ಎಂದರೆ ಸಾಕ್ಷಿಯು ನನ್ನ ಕಾಕಾನ ಹೆಸರಿನಲ್ಲಿ ಇದೆ ಎಂದು ಉತ್ತರಿಸುತ್ತಾರೆ. ನನ್ನ ಕಾಕಾನ ಹೆಸರು ಜಿಲಾನಿ ಇರುತ್ತದೆ. ಎಷ್ಟು ವರ್ಷಗಳಿಂದ ಜಿಲಾನಿಯ ಹೆಸರು ಇದೆ ಎಂದರೆ ಗೊತ್ತಿಲ್ಲ.

ಸರ್ವೆ ನಂ. 292 ಮತ್ತು 296 ಮೂಲತ: ಹುಸೇನಮಾ ಗಂಡ ಮೀರಜಾಬೇಗ ಮುಲ್ಲಾರವರ ಆಸ್ತಿ ಎಂದರೆ ಸರಿ. ಸದರಿ ಜಮೀನಿನ ಮೊದಲಿನ ಸರ್ವೆ ನಂ. 175,176,177, 178 ಇತ್ತು ಎಂದರೆ ಗೊತ್ತಿಲ್ಲ. ದಿ: 18-07-1940 ರಲ್ಲಿ ಹುಸೇನಮಾ ಸದರಿ ನಾಲ್ಕು ಆಸ್ತಿಗಳ ಬಗ್ಗೆ ಯಾಶೀನಖಾನ ತಂದೆ ನೂರುದ್ದೀನ ಮುಲ್ಲಾರವರಿಗೆ 'ಹಿಬಾಬುಲ್ ಇವಜ್' ಪ್ರಕಾರ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. 1940 ದಾಖಲೆ ಪ್ರಕಾರ ಯಾಶೀನಖಾನ ಸದರಿ ಜಮೀನಿನ ಮಾಲೀಕನಾದ

ಎಂದರೆ ಸರಿ. 1952 ರಲ್ಲಿ ಯಾಶೀನಖಾನ 8 ನೇ ಪ್ರತಿವಾದಿಗೆ ಪಶ್ಚಾತಮಾಲ್ಕಿ ಎಂದು ಮಾಡಿಕೊಟ್ಟಿದ್ದಾ ಎಂದರೆ ಗೊತ್ತಿಲ್ಲ. 1980 ರಲ್ಲಿ ಯಾಶೀನಖಾನ 8 ನೇ ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿ ಬಗ್ಗೆ ಹಕ್ಕು ಬಿಟ್ಟು ಕೊಟ್ಟಿದ್ದ ಎಂದರೆ ಸರಿ. ಅದರಂತೆ ಕಂದಾಯ ದಾಖಲೆಯಲ್ಲಿ 8 ನೇ ಪ್ರತಿವಾದಿ ಹೆಸರು ಬಂದಿತ್ತು ಎಂದರೆ ಗೊತ್ತಿಲ್ಲ. 8 ನೇ ಪ್ರತಿವಾದಿ 1990 ರ ಮೋದಲು ತನ್ನ ತಂದೆಯಾದ ಮೈನುದ್ದಿನ ಖಾಜಿರವರಿಗೆ ಬಿಟ್ಟುಕೊಟ್ಟಿದ್ದ ಎಂದರೆ ಗೊತ್ತಿಲ್ಲ. ಆ ಪ್ರಕಾರ ಡ ನಂ. 2654 ಮೈನುದ್ದಿರವರ ಹೆಸರಿಗೆ ಬಂದಿತ್ತು ಎಂದರೆ ಗೊತ್ತಿಲ್ಲ. ಮೈನುದ್ದಿನ ಖಾಜಿ 1996 ರಲ್ಲಿ ತೀರಿಕೊಂಡಿದ್ದಾರೆ ಸದರಿ ಎರಡು ಆಸ್ತಿಗಳು ಅವರ ಹೆಸರಲ್ಲಿ ಇತ್ತು ಎಂದರೆ ಗೊತ್ತಿಲ್ಲ.

ಮೈನುದ್ದಿನ ಖಾಜಿಗೆ ನಾಲ್ಕು ಜನ ಹೆಣ್ಣು ಮಕ್ಕಳು ಮತ್ತು ಮೂರು ಜನ ಗಂಡು ಮಕ್ಕಳು ಅವರೆಂದರೆ 7 ರಿಂದ 9 ಮತ್ತ 11, 17 ಮತ್ತು ಮೃತ ಹಮೀದಾಬೇಗಂ ಎಂದರೆ ಗೊತ್ತಿಲ್ಲ. ಮೈನುದ್ದಿನ ಖಾಜಿ ತೀರಿಕೊಂಡ ನಂತರ ಅವರ ನಾಲ್ಕ ಜನ ಹೆಣ್ಣು ಮಕ್ಕಳು ಮತ್ತು ಮೂರು ಜನ ಗಂಡು ಮಕ್ಕಳು ದಾವಾ ಜಮೀನು ಅವರ ಹೆಸರಿಗೆ ವಾರಸಾ ಮಾಡಿಕೊಂಡಿದ್ದರು ಎಂದರೆ ಗೊತ್ತಿಲ್ಲ. ಮೈನುದ್ದಿನಖಾಜಿ ತೀರಿಕೊಂಡ ನಂತರ ಡ ನಂ. 5323 ಅವರ ಮಕ್ಕಳ ಹೆಸರಿಗೆ

ಮಂಜೂರಾಗಿದೆ ಎಂದರೆ ಸರಿಯಲ್ಲ. ಮೈನುದ್ದಿನ ಖಾಜಿ ಆಸ್ತಿಯಲ್ಲಿ ವಾರಸಾ ನಾತೆಯಿಂದ ಪ್ರತಿವಾದಿ ನಂ. 11,17 ಮತ್ತು 13 ರಿಂದ 16 ರವರಿಗೆ ದಾವಾ ಆಸ್ತಿಯಲ್ಲಿ ಭಾಗ ಇದೆ ಎಂದರೆ ಸಾಕ್ಷಿಯು ಇಲ್ಲ ಎಂದು ಉತ್ತರಿಸುತ್ತಾರೆ. ಮೈನುದ್ದಿನ ತೀರಿಕೊಂಡ ನಂತರ ಎಲ್ಲರು ದಾವಾ ಅಸ್ತಿಯ ಕಬ್ಜೆಯಲ್ಲಿ ಇದ್ದು ಅವರೇ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಇಲ್ಲ ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿಗೆ ಮತ್ತು ದಫೇದಾರ ಮನೆತನಕ್ಕೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಮ್ಮ ತಂದೆಯಾಗಲಿ ನಿಮ್ಮ ಅಜ್ಜಆಗಲೀ ನಿಮ್ಮ ಮನೆತನದವರಾಗಲಿ ದಾವಾ ಆಸ್ತಿಯ ಕಬ್ಜೆಯಲ್ಲಿ ಇಲ್ಲ ಎಂದರೆ ಸರಿಯಲ್ಲ. ವಾದಿಯರು ಎಂದೂ ಮೂಸುತಿ ಗ್ರಾಮದಲ್ಲಿ ಇರುವುದಿಲ್ಲ ಸೋಲಾಪೂರದಲ್ಲಿ ಇರುತ್ತೀರಿ ಎಂದರೆ ಸಾಕ್ಷಿ ನಮ್ಮ ಕಾಕಾರವರು ಮಸೂತಿಯಲ್ಲಿ ಇರುತ್ತಾರೆ ನಾವು ದುಡಿದು ತಿನ್ನಲು ಸೋಲಾಪೂರಕ್ಕೆ ಹೋಗಿರುತ್ತೇವೆ ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿಯ ಕಂದಾಯ ದಾಖಲೆಯಲ್ಲಿ ನಿಮ್ಮ ಅಜ್ಜನ ಹೆಸರಾಗಲಿ, ತಂದೆ ಹೆಸರಲಾಗಿ ಎಂದು ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಜಮೀನುಗಳನ್ನು 12 ನೇ ಪ್ರತಿವಾದಿ ಎನ್.ಟಿ.ಪಿ.ಸಿ.ಗಾಗಿ ಭೂಸ್ವಾಧೀನಪಡಿಸಿಕೊಂಡಿದ್ದಾರೆ ಎಂದರೆ ಸರಿ. ಪರಿಹಾರ ಹಣದಲ್ಲಿ ಪ್ರತಿವಾದಿಯರು ನಿಮಗೂ ಹಣ ಕೊಡುಬೇಕು

ಎಂಬ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮೈನುದ್ದಿನಖಾಜಿರವರಿಂದ ಅವರ ಮಕ್ಕಳ ಹೆಸರು ಕಂದಾಯ ದಾಖಲೆಯಲ್ಲಿ ನಮೂದಾಗಿರುವ ಬಗ್ಗೆ ಎಂದೂ ತಕರಾರು ಮಾಡಿಲ್ಲ ಎಂದರೆ ಸಾಕ್ಷಿಯು ಖಾಜಿ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿಯಲ್ಲಿ ನಿಮಗೆ ಯಾವುದೇ ಹಕ್ಕು ಇಲ್ಲದಿದ್ದರು ಸಹ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆ ಮಾಡಿರುತ್ತೀರಿ ಎಂದರೆ ಸರಿಯಲ್ಲ.

**1,10,11 ನೇ ಪ್ರತಿವಾದಿ ಪರ ವಕೀಲರು ಗೈರು ಹಾಜರಿದ್ದ ಕಾರಣ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

ಹೆಚ್ಚುವರಿ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ